**ದಿನಾಂಕ 07.07.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ BSD ವಕೀಲರಿಂದ**

ಈ ದಾವೆಯನ್ನು ನಾನು, ನನ್ನ ಅತ್ತೆ, ನನ್ನ ಮಗ ಮತ್ತು ನನ್ನ ಮೈದುನ ಸೇರಿ ಸಲ್ಲಿಸಿರುತ್ತೇವೆ. ಸದರಿ ನಮ್ಮ ಜಮೀನಿನಲ್ಲಿ ದೌರ್ಜನ್ಯ ಮಾಡಿ 99 ಮನೆ ಮನೆ ಕಟ್ಟಿಕೊಂಡಿರುತ್ತಾರೆ ಆದ್ದರಿಂದ ನಮಂ ಜಮೀನು ನಮಗೆ ಬೇಕು ಈ ದಾವೆ ಸಲ್ಲಿಸಿರುತ್ತೇವೆ. 99 ಮನೆಗಳ ಪೈಕಿ ಅರ್ಧ ಮನೆಗಳು ಕಟ್ಟಿರುತ್ತಾರೆ ಇನ್ನೂ ಅರ್ಧ ಮನೆಗಳು ಖಾಲಿ ಇರುತ್ತವೆ. ನಾನು ಈಗ ವಂದಲಿ ಗ್ರಾಮದಲ್ಲಿ ವಾಸವಿರುತ್ತೇನೆ ಮೊದಲು ಬೆಂಗಳೂರಿನಲ್ಲಿ ಇದ್ದೆವು. ವಂದಲಿ ಗ್ರಾಮದಲ್ಲಿ ನನ್ನ ಮನೆ ಇರುತ್ತದೆ. ದಾವ ಜಮೀನಿನಲ್ಲಿ ನಮ್ಮ ಮನೆ ಇರುತ್ತದೆ. ಸದರಿ ನಮ್ಮ ಮನೆ ಕಟ್ಟಿ 4 ವರ್ಷ ಆಗಿರುತ್ತದೆ. ಈ ದಾವೆ ಸಲ್ಲಿಸಿದ ನಂತರ ದಾವ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸವಿರುತ್ತೇವೆ. ಒಂದೇ ಮನೆ ಕಟ್ಟಿಕೊಂಡು ವಾಸವಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಮನೆ ಎಂದರೆ ಟಿನ್ ಶೆಡ್ ಇರುತ್ತದೆ ಎಂದು ನುಡಿಯುತ್ತಾರೆ. ಮನೆ ಕಟ್ಟಿಕೊಂಡವರು ಅವರವರ ಹೆಸರಿಗೆ ಪಂಚಾಯಿತಿಯಲ್ಲಿ ತಮ್ಮ ಹೆಸರುಗಳನ್ನು ದಾಖಲು ಮಾಡಿಕೊಂಡಿರುತ್ತಾರೆ. ನಾನು ನನ್ನ ಹೆಸರು ಪಂಚಾಯಿತಿಯಲ್ಲಿ ದಾಖಲು ಮಾಡಿಕೊಂಡಿಲ್ಲ. ಸದರಿ ಮನೆ ಕಟ್ಟಿಕೊಂಡ 99 ಜನರು ಪಂಚಾಯಿತಿಗಳಲ್ಲಿ ತಮ್ಮ ಹೆಸರುಗಳನ್ನು ಯಾವಾಗ ಮಾಡಿಕೊಂಡಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ನಾವು ಬೆಂಗಳೂರಿನಿಂದ 4 ವರ್ಷಗಳ ಹಿಂದೆ ವಂದಲಿ ಗ್ರಾಮಕ್ಕೆ ಬಂದಾಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ದಾವ ಜಮೀನು ಸ.ನಂ.104 ರಲ್ಲಿ 4 ಎಕರೆ ಇರುತ್ತದೆ. ಸದರಿ ದಾವ ಜಮೀನು ನನ್ನ ಅತ್ತೆ 1 ನೇ ವಾದಿ ಹೆಸರಿನಲ್ಲಿ ಇರುತ್ತದೆ. ಮೊದಲು ನನ್ನ ಗಂಡನ ತಂದೆ ಹೆಸರಿನಲ್ಲಿ ಇದ್ದು ನಂತರ ನನ್ನ ಅತ್ತೆ ಹೆಸರಿಗೆ ಮುಟೇಶನ ಆಗಿರುತ್ತದೆ. 1 ಮತ್ತು 2 ನೇ ವಾದಿಗಳು ಹೊಸಪೇಟೆಯಲ್ಲಿ ಇರುತ್ತಾರೆ. ನನ್ನ ವಾದ ಪತ್ರದಲ್ಲಿ 1 ಮತ್ತು 2 ನೇ ವಾದಿಗಳ ವಿಳಾಸ ವಂದಲಿ ಎಂದು ತೋರಿಸಿರುತ್ತೇನೆ ಸಾಕ್ಷಿ ಮುಂದುವರೆದು ದುಡಿದು ತಿನ್ನಲು ಹೊಸಪೇಟೆಗೆ ಹೋಗಿದ್ದು ಈಗ ಅಲ್ಲಿಯೇ ಇರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ಗಂಡನ ತಂದೆ ಹೆಸರು ಅಮರುಪ್ಪ ತಂದೆ ಸಾರೆಪ್ಪ ಇರುತ್ತದೆ. ನನ್ನ ಗಂಡ 20 ವರ್ಷಗಳ ಹಿಂದೆ ಮೃತಪಟ್ಟಿರುತ್ತಾನೆ. ನನ್ನ ಮಾವ ಅಮರಪ್ಪ ಅದಕ್ಕಿಂತ ಮೊದಲೇ ಮೃತಪಟ್ಟಿರುತ್ತಾನೆ. ನನ್ನ ಗಂಡ ಜೀವಂತ ಇರುವಾಗಲೇ ದಾವ ಆಸ್ತಿಯನ್ನು ನನ್ನ ಅತ್ತೆ

ಹೆಸರಿಗೆ ಮುಟೇಶನ ಮಾಡಲಾಗಿರುತ್ತದೆ. ಮುಟೇಶನ ಮಾಡಿದ ವರ್ಷ ಹೇಳಲು ಬರುವುದಿಲ್ಲ. ನ್ಯಾಯಾಲಯಕ್ಕೆ ದಾಖಲಾತಿ ಸಲ್ಲಿಸಿರುತ್ತೇನೆ. ಆ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ.

ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮ ಜಮೀನು ನಮಗೆ ಬರಬೇಕು ಎಂದು ಬರೆದಿರುತ್ತಾರೆ. ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ 99 ಜನ ಮನೆ ಕಟ್ಟಿರುತ್ತಾರೆ ಎಂದು ಬರೆಸುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಕೇವಲ ಮನೆ ಕಟ್ಟಿರುತ್ತಾರೆ ಎಂದು ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದಾವ ಜಮೀನಿನಲ್ಲಿ ಪ್ರತಿವಾದಿಗಳು ದೌರ್ಜನ್ಯ ಮಾಡಿ ಮನೆ ಕಟ್ಟಿದ್ದರಿಂದ ಅವರ ವಿರುದ್ಧ ದಾವೆ ಸಲ್ಲಿಸಿರುತ್ತೇನೆ. ಸದರಿಯವರಲ್ಲಿ ಅರ್ಧ ಜನರ ಹೆಸರುಗಳು ಪಂಚಾಯಿತಿಯಲ್ಲಿ ದಾಖಲು ಇದ್ದು ಅವುಗಳನ್ನು ಪಡೆದಿರುತ್ತೇವೆ ಇನ್ನೂ ಉಳಿದವರ ಹೆಸರು ದಾಖಲು ಇರುವುದಿಲ್ಲ.

ಹನುಮಂತ ತಂದೆ ಹುಲುಗಪ್ಪ ಮತ್ತು ತಿಪ್ಪಣ್ಣ ಹೆಸರು ಮಾತ್ರ ಗೊತ್ತು ಉಳಿದವರ ಹೆಸರು ಗೊತ್ತಿಲ್ಲ. ಹನುಮಂತ ಮತ್ತು ತಿಪ್ಪಣ್ಣ ಇವರ ಮೇಲೆ ಈ ದಾವೆ ಸಲ್ಲಿಸಿರುತ್ತೇನೆ. ಅವರ ಮೇಲೆ ದಾವೆ ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಹನುಮಂತ ತಂದೆ ಜಟ್ಟೆಪ್ಪ ಕುರ್ಡಿ ಹೆಸರಿನಲ್ಲಿ ಪಂಚಾಯಿತಿಯಲ್ಲಿ ದಾಖಲು ಇರುತ್ತದೆ. ಆ ಕುರಿತು ನ್ಯಾಯಾಲಯಕ್ಕೆ ದಾಖಲಾತಿ ಸಲ್ಲಿಸಿರುತ್ತೇನೆ. ಸದರಿ 1 ನೇ ಪ್ರತಿವಾದಿ ಹೆಸರಿನಲ್ಲಿ ಪಂಚಾಯಿತಿಯಲ್ಲಿ ದಾಖಲೆ ಇರುವುದಿಲ್ಲ ಮತ್ತು ಆ ಕುರಿತು ನಾನು ನ್ಯಾಯಾಲಯಕ್ಕೆ ದಾಖಲಾತಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ದಾವ ಜಮೀನಿನಲ್ಲಿ ಮನೆಗಳಿಗೆ ತೆರಳಲು ಸಿಸಿ ರಸ್ತೆ ಮತ್ತು ಕುಡಿಯುವ ನೀರಿನ ನಳಗಳನ್ನು ಹಾಕಲಾಗಿದೆ ಎಂದರೆ ನಾವು ವಂದಲಿ ಗ್ರಾಮಕ್ಕೆ ಬರುವ ಪೂರ್ವದಲ್ಲಿ ಹಾಕಲಾಗಿದೆ ಎಂದು ನುಡಿಯುತ್ತಾರೆ. ಸಿಸಿ ರಸ್ತೆ ಸರಕಾರದಿಂದ ಮಾಡಲಾಗಿದೆ ಎಂದರೆ ಯಾರು ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ದಾವ ಜಮೀನಿನಲ್ಲಿ ಅಂಗನವಾಡಿ ಕಟ್ಟಡ ಇದೆ ಎಂದರೆ ಸರಿ. ಅಂಗನವಾಡಿ ಕಟ್ಟಡದಲ್ಲಿ ಶಾಲೆ ನಡೆಯುತ್ತಿದೆ ಎಂದರೆ ಸರಿ. ಅಂಗನವಾಡಿ ಕಟ್ಟಡ ಯಾವ ವರ್ಷ ಆಗಿರುತ್ತದೆ ನನಗೆ ಗೊತ್ತಿಲ್ಲ. ಅಂಗನವಾಡಿ ಕಟ್ಟಿದ ಬಗ್ಗೆ ದಾವೆಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುತ್ತೇನೆ. ನಮೂದು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಗೆ ಕಾಲವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.